## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 455(540) |
| ಸದಸ್ಯರ ಹೆಸರು | ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 12.12.2024 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಇತ್ತೀಚಿನ ಆಗಸ್ಟ್ 27ರಂದು ನಡೆದ 384 ಕೆ.ಎ.ಎಸ್ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ನಡೆದ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿನ ಭಾಷಾಂತರದಲ್ಲಿ ಸಾಕಷ್ಟು ಲೋಪಗಳಾಗಿ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದು ನಿಜವೇ: ನಿಜವಿದ್ದಲ್ಲಿ ಈ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಾದ ಲೋಪದೋಷಗಳನ್ನು ಪತ್ತೆ ಹಚ್ಚಲಾಗಿದೆಯೇ ಈ ಬಗ್ಗೆ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯ ಅಂಶಗಳಾವುವು: (ಪೂರ್ಣ ವಿವರ ನೀಡುವುದು) | ಕರ್ನಾಟಕ ಲೋಕಸೇವಾ ಆಯೋಗವು 2024ರ ಆಗಸ್ಟ್ 27ರಂದು ನಡೆಸಿದ ಕೆ.ಎ.ಎಸ್ ಪೂರ್ವಭಾವಿ ಪರೀಕ್ಷೆಯಲ್ಲಿನ ಪ್ರಶ್ನೆಪತ್ರಿಕೆಯಲ್ಲಿನ ಕನ್ನಡ ಭಾಷಾಂತರದ ಕೆಲವು ಪ್ರಶ್ನೆಗಳಲ್ಲಿ ಲೋಪ ಕಂಡುಬಂದಿದ ಹಿನ್ನೆಲೆಯಲ್ಲಿ ಮರುಪರೀಕ್ಷೆಯನ್ನು ನಡೆಸಲು ನಿರ್ಧರಿಸಲಾಗಿರುತ್ತದೆ.<br><br>ಈ ಸಂಬಂಧ ಆಯೋಗವು ದಿನಾಂಕ 03.09.2024 ಮತ್ತು 20.09.2024ರಂದು ಸರ್ಕಾರಕ್ಕೆ ವರದಿಯನ್ನು ನೀಡಿದ್ದು ವಿವರ ಕೆಳಕಂಡಂತಿದೆ.<br><br>1. ಪರೀಕ್ಷೆಗೆ ಹಾಜರಾದ 1,31,855 ಅಭ್ಯರ್ಥಿಗಳಲ್ಲಿ ಪತ್ರಿಕೆ-1 ಮತ್ತು ಪತ್ರಿಕೆ-2ಕ್ಕೆ ಸಂಬಂಧಿಸಿದ ಪ್ರಶ್ನೆಗಳಲ್ಲಿ ಅನುಕ್ರಮವಾಗಿ, 109 ಮತ್ತು 97 ಅಭ್ಯರ್ಥಿಗಳು ಕನ್ನಡ ಭಾಷಾಂತರದಲ್ಲಿ ಉಂಟಾಗಿರುವ ಲೋಪದ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.<br>2. ಆಯೋಗವು 2021ನೇ ಸಾಲಿನಲ್ಲಿ ಪ್ರಶ್ನೆಗಳ ಸೋರಿಕೆಯ ಹಿನ್ನೆಲೆಯಲ್ಲಿ ರಚಿಸಲಾಗಿದ್ದ ಉಪಸಮಿತಿಯು ಭಾಷಾಂತರಕಾರರು ಭಾಷಾಂತರಿಸಿರುವ ಪ್ರಶ್ನೆಗಳನ್ನು ಗೋಪ್ಯ ಶಾಖೆಯ ಅಧಿಕಾರಿ/ಸಿಬ್ಬಂದಿಗಳು ನೋಡುವ ಅವಕಾಶ ಇರಕೂಡದೆಂದು ಸಲಹೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ಪ್ರಶ್ನೆಗಳನ್ನು ಆಯೋಗದಿಂದ ಪರಿಶೀಲಿಸಿರುವುದಿಲ್ಲ.<br>3. ಪ್ರಶ್ನೆಗಳ ಕನ್ನಡ ಭಾಷಾಂತರದಲ್ಲಿನ ಲೋಪಗಳನ್ನು ಪರಿಶೀಲಿಸಲು, ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರುಗಳ |

| | | |
|---|---|---|
| | | ದರ್ಜೆಯಲ್ಲಿರುವಂತಹ ಸರಾಸರಿ 15 ವರ್ಷಗಳಿಗೂ ಅಧಿಕ ಸೇವಾನುಭವ ವನ್ನು ಹೊಂದಿರುವ ಹಾಗು ಉತ್ತಮ ಕನ್ನಡ ಭಾಷಾ ಜ್ಞಾನವನ್ನು ಹೊಂದಿರುವ ಹಾಗೂ ಆಯಾ ವಿಷಯಗಳ ಮೂವರು ವಿಷಯ ತಜ್ಞರುಗಳನ್ನೊಳಗೊಂಡ ಒಟ್ಟು 11 ಸಮಿತಿಗಳನ್ನು ರಚಿಸಲಾಗಿರುತ್ತದೆ.<br>4. ಪ್ರಶ್ನೆಯನ್ನು ಸಿದ್ಧಪಡಿಸಿದ ವಿಷಯ ತಜ್ಞರು ಹಾಗೂ ಭಾಷಾಂತರ ಇಲಾಖೆಯ ಭಾಷಾಂತರಕಾರರು ಪ್ರಶ್ನೆಗಳನ್ನು ಭಾಷಾಂತರಿಸಿ ನೀಡಿರುತ್ತಾರೆ.<br>5. ಸದರಿ ಸಮಿತಿಯ ವಿಷಯ ತಜ್ಞರುಗಳು ಪ್ರಶ್ನೆ ಗಳ ಭಾಷಾಂತರವನ್ನು ಪರಿಶೀಲಿಸಿ, ಭಾಷಾಂತರದ ಲೋಪ ದಿಂದಾಗಿ ಪತ್ರಿಕೆ-1ರಲ್ಲಿ 05 ಪ್ರಶ್ನೆಗಳಿಗೆ ಹಾಗೂ ಪತ್ರಿಕೆ-2ರಲ್ಲಿನ 05 ಪ್ರಶ್ನೆಗಳ ಕೀ-ಉತ್ತರಗಳು ಪರಿಷ್ಕೃತಗೊಳ್ಳಲಿವೆ ಎಂಬ ಅಭಿಪ್ರಾಯವನ್ನು ನೀಡಿರುತ್ತಾರೆ. |
| ಆ) | ಈ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಾದ ಲೋಪದೋಷಗಳಿಗೆ ಕಾರಣರಾದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳಲ್ಲಿಯ ಕನ್ನಡ ಭಾಷಾಂತರ ಕಾರ್ಯವನ್ನು ಯಾವುದೇ ಲೋಪದೋಷಗಳಿಲ್ಲದೆ ಸಿದ್ಧಪಡಿಸಲು ಉನ್ನತ ಮಟ್ಟದಲ್ಲಿ ಹಲವಾರು ಸಭೆಗಳನ್ನು ನಡೆಸಿ, ಆಯೋಗದಲ್ಲಿ ಪರಿಣಿತ ಭಾಷಾಂತರಕಾರರಿಗೆ ಜವಾಬ್ದಾರಿ ನೀಡುವುದು ಹಾಗೂ ಭಾಷಾಂತರ ವನ್ನು ಖಚಿತಗೊಳಿಸಲು ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿದವರನ್ನು ಜವಾಬ್ದಾರ ರನ್ನಾಗಿ ಮಾಡಲು ಕ್ರಮವಹಿಸುವುದು ಮತ್ತು ಮುಂದಿನ ದಿನಗಳಲ್ಲಿ ಈ ರೀತಿ ಲೋಪದೋಷಗಳಾಗದಂತೆ ಜಾಗರೂಕತೆ ಯಿಂದ ಮತ್ತು ಪಾರದರ್ಶಕತೆಯಿಂದ ಪರೀಕ್ಷೆ ಗಳನ್ನು ನಡೆಸುವಂತೆ ಆಯೋಗಕ್ಕೆ ಕಟ್ಟು ನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ |
| ಇ) | ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಸೂಕ್ತ ಭಾಷಾಂತರ/ಕನ್ನಡ ಅನುವಾದಕ ತಜ್ಞರುಗಳ ಕೊರತೆ ಇದೆಯೇ: ಇದ್ದಲ್ಲಿ ಈ ಕೊರತೆಯನ್ನು ನೀಗಿಸಲು ಆಯೋಗವು ಕೈಗೊಂಡ ಕ್ರಮವೇನು: | ಆಯೋಗವು ನಡೆಸುವಂತಹ ವಿವಿಧ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳ ಭಾಷಾಂತರ ಕಾರ್ಯಕ್ಕಾಗಿ ಭಾಷಾಂತರ ಇಲಾಖೆಯಿಂದ ಭಾಷಾಂತರಕಾರರನ್ನು ನೇಮಿಸಿ ಕೊಳ್ಳಲಾಗುತ್ತಿದೆ. ಆದಾಗ್ಯೂ, ಕೊರತೆ ಉಂಟಾದಲ್ಲಿ, ಬಾಹ್ಯ ಮೂಲದಿಂದ |
| ಈ) | ಭಾಷಾಂತರಕಾರರು/ಕನ್ನಡ ಅನುವಾದಕರನ್ನು ಯಾವ ನಿಯಮ | ಭಾಷಾಂತರಕಾರರ ಸೇವೆಯನ್ನು ಪಡೆದು ಭಾಷಾಂತರ ಕಾರ್ಯವನ್ನು ನೆರವೇರಿಸ |

| | | |
|---|---|---|
| | ಹಾಗೂ ಮಾನದಂಡದಡಿಯಲ್ಲಿ ನೇಮಿಸಿಕೊಳ್ಳಲಾಗುತ್ತದೆ: | ಲಾಗುತ್ತಿದೆ. |
| ಉ) | ಕೆಎಎಸ್ ಪೂರ್ವಭಾವಿ ಮರುಪರೀಕ್ಷೆಯನ್ನು ಯಾವ ದಿನಾಂಕದಂದು ನಡೆಸಲು ಆಯೋಗವು ತೀರ್ಮಾನಿಸಿದೆ: ಈ ಕುರಿತು ಆಯೋಗವು ಕೈಗೊಂಡ ಪೂರ್ವ ಸಿದ್ಧತೆಗಳೇನು? (ವಿವರವಾದ ಮಾಹಿತಿಯನ್ನು ಒದಗಿಸುವುದು) | 2023-24ನೇ ಸಾಲಿನ ಕೆಎಎಸ್ ಪೂರ್ವಭಾವಿ ಮರುಪರೀಕ್ಷೆಯನ್ನು ದಿನಾಂಕ:29-12-2024ರಂದು ನಡೆಸಲು ಆಯೋಗವು ನಿಗದಿಪಡಿಸಲಾಗಿರುತ್ತದೆ.<br><br>ಆಯೋಗವು ನಿಗದಿಪಡಿಸಿರುವ ದಿನಾಂಕ 29.12.2024ರ ಮರುಪರೀಕ್ಷೆಯನ್ನು ಪ್ರಶ್ನಿಸಿ, ಶ್ರೀಮತಿ ಸ್ಫೂರ್ತಿ ಭೈರಪ್ಪನವರ್ ಇವರು ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ:106087/2024 ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದು, ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಸಿಆಸುಇ 301 ಎಸ್‌ಎಸ್‌ಸಿ 2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ